**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.</u>**

ಅಸಲು ದಾವೆ ನಂ.93/2016

ಸಿಡಬ್ಲ್ಯೂ : 02
ದಿನಾಂಕಃ 20-02-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಅಶೋಕ ಮಲ್ಲಮ್ಮನವರ |
| ತಂದೆ ಹೆಸರು | - ಚನ್ನಬಸಪ್ಪ ಮಲ್ಲಮ್ಮನವರ |
| ವಯಸ್ಸು | - 39 ವರ್ಷ |
| ಉದ್ಯೋಗ | - ತಾಲೂಕಾ ಸರ್ವೆಯರ್ ಸವಣೂರ |
| ವಾಸ ಸ್ಥಳ | - ಸವಣೂರ |

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ ಎಂ ಎಂ ವಕೀಲರಿಂದ</u>**

ನಾನು ಜನೇವರಿ- 2025 ರಿಂದ ಇಲ್ಲಿಯವರೆಗೂ ಸವಣೂರಿನ ತಹಶೀಲ್ದಾರ ಕಚೇರಿಯಲ್ಲಿ ತಾಲೂಕಾ ಭೂ ಮಾಪನ ಅಧಿಕಾರಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಮಗೆ ನ್ಯಾಯಾಲಯದ ಮುಖಾಂತರ ಸ್ಥಳವನ್ನು ಅಳತೆ ಮಾಡಿ ಅದರ ವರಿದಿಯನ್ನು ಸಲ್ಲಿಸುವಂತೆ ನೇಮಿಸಲಾಗಿತ್ತು. ಆ ಕುರಿತು ನಾನು ವಾದಿ ಮತ್ತು ಪ್ರತಿವಾದಿಯರಿಗೆ ನೊಂದಾಯಿತು ಅಂಚೆ ಮೂಲಕ ನೋಟಿಸನ್ನು ಕಳುಹಿಸಿರುತ್ತೇನೆ. ದಿಃ 06-06-2026 ರಂದು ಅಳತೆ ಕಾರ್ಯವನ್ನು ಕೈಗೊಂಡಿರುತ್ತೇನೆ. ದಿಃ 04-07-2025 ರಂದು ನನ್ನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ವರದಿ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಒಟ್ಟಾರೆಯಾಗಿ ನಿಸಿ-1 ಎಂದು ಗುರುತಿಸಲಾಯಿತು. ವರದಿ ಜೊತೆ ಲಗತ್ತಿಸಿದ ಪಿ ಟಿ ಶೀಟನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ- 2 ಎಂದು ಗುರುತಿಸಲಾಯಿತು.

ನಾನು ಅಳತೆ ಕಾರ್ಯ ಕೈಗೊಳ್ಳಲು ಡಿ ಜಿ ಪಿ ಎಸ್ ಮಶಿನನ್ನು ಬಳಸಿರುತ್ತೇನೆ. ನಾನು ಅಳತೆ ಕೈಗೊಂಡ ಬಗ್ಗೆ ಸಂಪೂರ್ಣ ವರದಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಯರ ಪರ ಶ್ರೀ ಎನ್ ಎಸ್ ಪಿ ವಕೀಲರಿಂದ</u>**

ಯಾರುಯಾರಿಗೆ ನೀವು ನೋಟಿಸ್ಸನ್ನು ಕೊಟ್ಟಿರುತ್ತೀರಿ ಎಂದರೆ ವಾದಿ ಮತ್ತು 1 ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ಹಾಗಾದರೆ 2 ರಿಂದ 5 ನೇ ಪ್ರತಿವಾದಿಯರಿಗೆ ನೋಟಿಸ ನೀಡಿಲ್ಲ

ಎಂದರೆ 1 ನೇ ಪ್ರತಿವಾದಿ ಮತ್ತು ಇತರರು - ರವರಿಗೆ ಕೊಟ್ಟಿರುತ್ತೇನೆ. ಎಲ್ಲಾ ಪ್ರತಿವಾದಿಯರಿಗೆ ನೀವು ನೋಟಿಸ್ಸ ನೀಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ನೀಡಿದ ನೋಟಿಸನ ಅಂಚೆ ರಶೀದಿ ಮಾತ್ರ ಇದೆ ಎಂದರೆ ಸರಿ. ಸದರಿ ನೋಟಿಸ ಪ್ರತಿವಾದಿಯರಿಗೆ ತಲುಪಿದೆ ಎಂಬ ಸ್ವೀಕೃತಿ ಪ್ರತಿ ನಿಮಗೆ ಬಂದಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ನೀಡಿದ ನೋಟಿಸ 1 ನೇ ಪ್ರತಿವಾದಿಗೆ ಜಾರಿ ಆಗಿಲ್ಲ ಆದ ಕಾರಣ ಸ್ವೀಕೃತಿ ಪ್ರತಿ ನಿಮಗೆ ಬಂದಿಲ್ಲ ಎಂದರೆ ನಾವು ನೋಟಸ್ಸನ್ನು ಜಾರಿ ಮಾಡಿರುತ್ತೇವೆ. 1 ನೇ ಪ್ರತಿವಾದಿಗೆ ನೋಟಿಸ್ಸ ತಲುಪದೆ ಇದ್ದ ಕಾರಣ ಅವರು ಅಳತೆಯ ದಿನ ಗೈರು ಹಾಜರು ಇದ್ದರು ಎಂದರೆ ನಾನು ನೋಟಿಸ ಜಾರಿ ಮಾಡಿದ್ದೇನೆ.

ಪ್ರತಿವಾದಿಯರ ಅನುಪಸ್ಥಿತಿಯಲ್ಲಿ ನೀವು ನಿಮ್ಮ ಕೆಲಸವನ್ನು ಮಾಡಿರುತ್ತೀರಿ ಎಂದರೆ ಪ್ರತಿವಾದಿಯರು ಗೈರು ಹಾಜರಿದ್ದರು. ಆ ದಿನ ವಾದಿಯು ಹೇಳಿದ ಹಾಗೆ ಅಳತೆ ಮಾಡಿ ವರದಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವ ಯಾವ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದೀರಿ ಎಂದರೆ ನ್ಯಾಯಾಲಯದಿಂದ ಎಲ್ಲಾ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸರ್ವೆ ನಂ. 220/4 ರ ಅಳತೆ ಎಷ್ಟು ಇದೆ ಎಂದರೆ ನಮಗೆ ವಾದಿಯರ ಮತ್ತು ಪ್ರತಿವಾದಿಯರ ನಡುವೆ ಇರುವ ಗಡಿಯ ಬಗ್ಗೆ ಮಾತ್ರ ಅಳತೆ ಮಾಡಲು ತಿಳಿಸಿದ್ದು ಅದನ್ನು ಮಾತ್ರ ಮಾಡಿರುತ್ತೇವೆ. ಮುಂದುವರೆದು ನಾವು 220 ರ ಪೂರ್ವ ಭಾಗ ಮತ್ತು 219 ರ ಪಶ್ಚಿಮ ಭಾಗದ ಗಡಿಯನ್ನು ಮಾತ್ರ ಅಳತೆ ಮಾಡಿದ್ದೇವೆ.

ಸರ್ವೆ ನಂ. 220/4 ರ ಒಟ್ಟು ಅಳತೆಯನ್ನು ನೀವು ನಿಮ್ಮ ಪಿ ಟಿ ನಕ್ಷೆಯಲ್ಲಿ ತೋರಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 220/4 ರ ಒಟ್ಟು ಗಡಿಯನ್ನು ಸರಿಯಾಗಿ ತೋರಿಸಿದಾಗ ಮಾತ್ರ ವಾದಿ ಮತ್ತು ಪ್ರತಿವಾದಿಯರ ಗಡಿಗಳಲ್ಲಿ ಎಷ್ಟು ಮರಗಳು ಇವೆ ಎಂದು ಗೊತ್ತಾಗುತ್ತವೆ ಎಂದರೆ ನಾವು 220 ರ ಎಲ್ಲಾ ಹಿಸ್ಸೆಗಳನ್ನು ತೆಗೆದುಕೊಂಡು ನಮ್ಮ ವರದಿ ಸಲ್ಲಿಸಿದ್ದೇವೆ. ನಿಮ್ಮ ನಕ್ಷೆಯಲ್ಲಿ ಗಿಡಗಳ ಸಂಖ್ಯೆ 68 ಎಂದು ತೋರಿಸಿದ್ದು, 68 ನೇ ಗಿಡ ತೋರಿಸಿದ ಜಾಗದ ವರೆಗೂ ಪ್ರತಿವಾದಿಯರ ಜಮೀನು ಇದೆಯಾ ಎಂದರೆ ಸಾಕ್ಷಿಯು ದಾಖಲೆ ಪರಿಶೀಲಿಸಿ ಸರ್ವೆ ದಾಖಲೆ ಮತ್ತು ವಹಿವಾಟನ್ನು ನೋಡಿ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ. 220/4 ರ ಗಡಿ ಅಳತೆಯನ್ನು ನೀವುನಿಮ್ಮ ನಕ್ಷೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಹಾಗಾದರೆ ನೀವು ಪ್ರತಿವಾದಿಯರ ಜಮೀನಿನಲ್ಲಿರುವ ಗಿಡಗಳ ಸಂಖ್ಯೆಯನ್ನು ಯಾವ ಆಧಾರದ ಮೇಲೆ ಪ್ರತಿವಾದಿಯರ ಜಮೀನಿನಲ್ಲಿ ಬರುತ್ತದೆ ಎಂದು ನಮೂದು ಮಾಡಿದ್ದೀರಿಎಂದರೆ ಅಳತೆ ಮಾಡುವ ವೇಳೆಯಲ್ಲಿ ವಾದಿಯರು ಪ್ರತಿವಾದಿಯರ ಜಮೀನು 68 ನೇ ಗಿಡ ಇರುವ ತನಕ ಬರುತ್ತದೆ ಎಂದು ಹೇಳಿದ ಕಾರಣ ಮತುತ ರಿವಿಜನ್ ಟಿಪ್ಪಣಿ ನೋಡಿ ನಾನು ಅಲ್ಲಿಯವರೆಗೂ ಅಳತೆ ಮಾಡಿದ್ದೇನೆ. ಉಭಯ ಪಕ್ಷಗಾರರ ವಕೀಲರು

ಮೆಮೋ ಆಫ್ ಇನ್‌ಸ್ಟ್ರಕ್ಷನ ತೆಗೆದುಕೊಂಡು ಅಳತೆ ಕಾರ್ಯ ಮಾಡಿದ್ದೀರಾ ಎಂದರೆ ಸಾಕ್ಷಿಯು ದಾಖಲೆ ಪರಿಶೀಲಿಸಿ ಇಲ್ಲ ಎಂದು ನುಡಿಯುತ್ತಾರೆ. ಮೆಮೋ ಆಫ್ ಇನ್‌ಸ್ಟ್ರಕ್ಷನ ನನ್ನು ತೆಗದುಕೊಂಡು ಹೋಗದೆ ನೀವು ಅಳತೆ ಕಾರ್ಯ ಕೈಗೊಂಡಿರುತ್ತೀರಿ ಎಂದರೆ ಸರಿ. ಆದರೆ ಅಳತೆ ಕಾರ್ಯವನ್ನು ಅರ್ಜಿಯಆಧಾರದ ಮೇಲೆ ಸರ್ವೆ ದಾಖಲೆಗಳನ್ನು ಪರಿಶೀಲಿಸಿ ಮಾಡಿರುತ್ತೇವೆ. ಮೆಮೋ ಆಫ್ ಇನ್‌ಸ್ಟ್ರಕ್ಷನ ಅನ್ನು ತೆಗೆದುಕೊಂಡು ಹೋಗಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ನಮಗೆ ನ್ಯಾಯಾಲಯದಿಂದ ನೀಡಿದ ದಾಖಲೆಗಳ ಜೊತೆ ಅದನ್ನು ನೀಡಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.